## **37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

## ಸಿ.ಸಿ. ನಂ. **8861/2015**

ಫ್ರಾ.ಸಃ **4** ಚಾ.ಸಃ **4**

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದಪ್ಪ |
| ತಂದೆಯ/ಗಂಡನ ಹೆಸರು | ಹನುಮಯ್ಯ |
| ವಯಸ್ಸು | 66 ವರ್ಷ |
| ಉದ್ಯೋಗ | ವ್ಯವಸಾಯ |
| ವಿಳಾಸ | ಯಲ್ಲಯ್ಯನ ಪಾಳ್ಯ, ಬೆಂಗಳೂರು. |
| ಪ್ರ ವ ಬೋ ದಿನಾಂಕ | 24.08.2022 |

ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ

ನನಗೆ ಚಾಸಾ.1 ರವರ ಪರಿಚಯ ಇದೆ ಆಕೆ ಪೋತಾಪುರ ಗ್ರಾಮದವರು, ಅವರ ತಂದೆ ತಿಮ್ಮಯ್ಯ ಸಹ ನನಗೆ ಪರಿಚಯ ಇದ್ದಾರೆ. ಚಾಸಾ.1 ರವರ ಮದುವೆ ವಿಚಾರಗಳು ನನಗೆ ಗೊತ್ತಿದೆ. ಈಗ್ಗೆ ಸುಮಾರು 9 ವರ್ಷಗಳ ಹಿಂದೆ ಚಾಸಾ.1 ರವರಿಗೆ ಒಂದನೇ ಆರೋಪಿ ವೆಂಕಟೇಶ್ ರವರ ಜೊತೆ ಮದುವೆಯಾಗಿರುತ್ತದೆ. ಮದುವೆ ಮಾತುಕತೆಗೆ ನಾನು, ಹರೀಸಿಂಗ್, ಗೋವಿಂದಪ್ಪ, ಅಶ್ವಥಯ್ಯ ಮತ್ತು ಚಾಸಾ.1 ರವರ ತಂದೆ ಸೇರಿದ್ದೇವು, ಮದುವೆ ಮಾತುಕತೆಯಲ್ಲಿ ಹುಡುಗನಿಗೆ ಉಂಗುರ ಬ್ರೇಸ್ ಲೇಟ್, ಕತ್ತಿನ ಚೈನು ಮತ್ತು ಮೂರು ಲಕ್ಷ ಹಣ ಕೊಡುವಂತೆ ಆರೋಪಿತರು ಕೇಳಿರುತ್ತಾರೆ ಮತ್ತು ಹುಡುಗಿಗೆ ಸಹ ಒಡವೆಗಳನ್ನು ನೀವೇ ಹಾಕಬೇಕು ಎಂದು ಆರೋಪಿತರು ಕೇಳಿರುತ್ತಾರೆ, ಕೇಳಿದಂತೆ ಅವುಗಳನ್ನು ನೀಡಿ ಚಾಸಾ.1 ರವರು ತಂದೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಮದುವೆಯಾದ ನಂತರ ಸ್ವಲ್ಪ ದಿನ ಚೆನ್ನಾಗಿದ್ದು, ನಂತರದಲ್ಲಿ ಆರೋಪಿತರು ನಿಮ್ಮ ತವರು ಮನೆಯಿಂದ ಬಂಗಾರ ತೆಗೆದುಕೊಂಡು ಬಾ ಮತ್ತು ಸೈಟ್ ತೆಗೆದುಕೊಂಡು ಬಾ ಎಂದು ಆರೋಪಿತರು ಗಲಾಟೆ ಮಾಡಿರುತ್ತಾರೆ. ಆರೊಪಿತರು ಚಾಸಾ.1 ರವರಿಗೆ ಹೊಡೆಬಡೆ ಮಾಡಿ ಚಿತ್ರ ಹಿಂಸೆ ನೀಡಿರುತ್ತಾರೆ. ಚಾಸಾ.1 ರವರ ತಂದೆ ನನಗೆ ಈ ವಿಚಾರಗಳನ್ನು ನನಗೆ ತಿಳಿಸಿರುತ್ತಾರೆ. ಈ ಬಗ್ಗೆ ರಾಜಿ ಪಂಚಾಯ್ತಿ ಮಾಡಿದಾಗ ಆರೋಪಿತರು ಒಂದನೇ ಆರೊಪಿಗೆ ಒಂದು ಮನೆ ಬೋಗ್ಯ ಮಾಡಿಕೊಡುವಂತೆ ಹೇಳಿರುತ್ತಾರೆ, ಅದರಂತೆ ಚಾಸಾ.1 ರವರ ತಂದೆ ಜಯನಗರದಲ್ಲಿ ಒಂದು ಮನೆಯನ್ನು ಬೋಗ್ಯಕ್ಕೆ ಹಾಕಿ ಕೊಟ್ಟಿರುತ್ತಾರೆ. ಸದರಿ ಮನೆಯಲ್ಲಿ ಚಾಸಾ.1 ಮತ್ತು ಒಂದನೇ ಆರೋಪಿ ವಾಸವಿದ್ದಾಗಲೂ ಸಹ ಆರೋಪಿ ಚಾಸಾ.1 ರವರಿಗೆ ಹೊಲಸು ಮಾತುಗಳಿಂದ ಬೈದು, ಹಿಂಸೆ ನೀಡಿರುತ್ತಾರೆ. ಆ ಕಾರಣಕ್ಕೆ ಚಾಸಾ.1 ರವರು ಆರೋಪಿತರ ವಿರುದ್ಧ ದೂರು ನೀಡಿರುತ್ತಾರೆ.

ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ಈಗ ನ್ಯಾಯಲಯದ ಮುಂದೆ ನೋಡಿ ಗುರುತಿಸುತ್ತೇನೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದರಿಂದ **1,000/-** ರೂ. ಖರ್ಚು ಸಮೇತ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ

# **37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

## ಸಿ.ಸಿ. ನಂ. **8861/2015**

ಪ್ರಾ.ಸಃ **5** ಚಾ.ಸಃ **5**

| | |
|---|---|
| ಸಾಕ್ಷಿದಾರರ ಹೆಸರು | ಹರೀ ಸಿಂಗ್ |
| ತಂದೆಯ/ಗಂಡನ ಹೆಸರು | ಗುಲಾಬ್ ಸಿಂಗ್ |
| ವಯಸ್ಸು | 65 ವರ್ಷ |
| ಉದ್ಯೋಗ | ವ್ಯಾಪಾರ |
| ವಿಳಾಸ | ಮಾಗಡಿ ಟೌನ್, ಬೆಂಗಳೂರು. |
| ಪ್ರ ವ ಬೋ ದಿನಾಂಕ | 24.08.2022 |

ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ

ನನಗೆ ಚಾಸಾ.1 ರವರ ಪರಿಚಯ ಇದೆ. ಚಾಸಾ.1 ರವರ ತಂದೆ ತಿಮ್ಮಯ್ಯ ನನಗೆ 15-20 ವರ್ಷಗಳಿಂದ ಪರಿಚಯವಿದ್ದಾರೆ. ಅವರ ತಂದೆ ಪೋತಾಪುರ ಗ್ರಾಮದವರು, ಚಾಸಾ.1 ರವರ ಮದುವೆ ವಿಚಾರಗಳು ನನಗೆ ಗೊತ್ತಿದೆ. ಚಾಸಾ.1 ರವರಿಗೆ ಒಂದನೇ ಆರೋಪಿ ವೆಂಕಟೇಶ್ ರವರ ಜೊತೆ ದಿ. 06/05/2013 ರಲ್ಲಿ ಆರ್.ಆರ್ ಪ್ಯಾಲೇಸ್ ನಲ್ಲಿ ಮದುವೆಯಾಗಿರುತ್ತದೆ. ಮದುವೆಗೆ ಮುಂಚೆ ಮದುವೆ ಮಾತುಕತೆಗೆ ನಾನು, ಸಿದ್ದಪ್ಪ, ಗೋವಿಂದರಾಜು, ಅಶ್ವಥಯ್ಯ ಮತ್ತು ಚಾಸಾ.1 ರವರ ತಂದೆ ಸೇರಿದ್ದೇವು, ಮದುವೆ ಮಾತುಕತೆಯಲ್ಲಿ ಹುಡುಗನಿಗೆ ಒಡವೆಗಳು, ಸೈಟ್ ಮತ್ತು ಮೂರು ಲಕ್ಷ ಹಣ ಕೊಡುವಂತೆ ಆರೋಪಿತರು ಕೇಳಿರುತ್ತಾರೆ ಮತ್ತು ಹುಡುಗಿಗೆ ಸಹ ಒಡವೆಗಳನ್ನು ನೀವೇ ಹಾಕಬೇಕು ಎಂದು ಒಂದನೇ ಆರೋಪಿತನ ತಂದೆ-ತಾಯಿ ಮತ್ತು ಆತನ ಕುಟುಂಬದವರು ಕೇಳಿರುತ್ತಾರೆ, ಆರೋಪಿತರು ಕೇಳಿದಂತೆ ಒಡವೆ ಮತ್ತು ಹಣವನ್ನು ನೀಡಿ ಚಾಸಾ.1 ರವರು ತಂದೆ ಮದುವೆ ಮಾಡಿ ಕೊಟ್ಟಿರುತ್ತಾರೆ.

ಮದುವೆಯಾದ ನಂತರ ಚಾಸಾ.1 ರವರು ಆರೋಪಿತರು ಜೊತೆ ಗುರುಪ್ಪನಪಾಳ್ಯ ದಲ್ಲಿ ವಾಸವಾಗಿದ್ದರು. ಆರೋಪಿತರು ಸ್ವಲ್ಪ ದಿನ ಕಾಲ ಚಾಸಾ.1 ರವರನ್ನು ಚೆನ್ನಾಗಿ ನೋಡಿಕೊಂಡಿದ್ದು, ಆರೋಪಿತರು ಒಂದನೇ ಆರೋಪಿಗೆ ಒಂದು ಮನೆ ಬೋಗ್ಯ ಮಾಡಿಕೊಡುವಂತೆ ಹೇಳಿರುತ್ತಾರೆ, ಅದರಂತೆ ಚಾಸಾ.1 ರವರ ತಂದೆ ಎರಡು ಲಕ್ಷ ಹಣ ನೀಡಿ, ಜಯನಗರದಲ್ಲಿ ಒಂದು ಮನೆಯನ್ನು ಬೋಗ್ಯಕ್ಕೆ ಹಾಕಿ ಕೊಟ್ಟಿರುತ್ತಾರೆ. ಸದರಿ ಮನೆಯಲ್ಲೂ ಚಾಸಾ.1 ಮತ್ತು ಒಂದನೇ ಆರೋಪಿ ವಾಸವಿದ್ದಾಗಲೂ ಸಹ ಆರೋಪಿತರು ಚಾಸಾ.1 ರವರಿಗೆ ತವರು ಮನೆಯಿಂದ ಹಣ ಮತ್ತು ಸೈಟು

ಬರೆಸಿಕೊಂಡು ಬರುವಂತೆ ಒತ್ತಾಯಿಸಿ ಕಿರುಕುಳ ನೀಡಿರುತ್ತಾರೆ. ಹೊಲಸು ಮಾತುಗಳಿಂದ ಬೈದು, ಹಿಂಸೆ ನೀಡಿರುತ್ತಾರೆ. ಹಣ ತರದೇ ಇದ್ದರೇ ಆಕೆಯನ್ನು ಸಾಯಿಸುವುದಾಗಿ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ಚಾಸಾ.1 ರವರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿದ ಬಗ್ಗೆ ಚಾಸಾ.1 ನಮಗೆ ತಿಳಿಸಿರುತ್ತಾಳೆ. ಆರೋಪಿತರು ಚಾಸಾ.1 ರವರು ತವರು ಮನೆಯಿಂದ ಬಂಗಾರ ತೆಗೆದುಕೊಂಡು ಬಾ ಮತ್ತು ಸೈಟ್ ತೆಗೆದುಕೊಂಡು ಬಾ ಎಂದು ಆರೋಪಿತರು ಗಲಾಟೆ ಮಾಡಿರುತ್ತಾರೆ. ಆ ಕಾರಣಕ್ಕೆ ಚಾಸಾ.1 ರವರು ಆರೋಪಿತರ ವಿರುದ್ಧ ದೂರು ನೀಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ಈಗ ನ್ಯಾಯಲಯದ ಮುಂದೆ ನೋಡಿ ಗುರುತಿಸುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಹಿ. ಸ. ಸ. ಅ ವಕೀಲರಿಂದಃ</u>

ಆರೋಪಿತರು ಚಾಸಾ.1 ರವರಿಗೆ ಕೈಗಳಿಂದ ಹೊಡೆದು, ಮಾನಸಿಕವಾಗಿ ಬೈದು, ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿರುತ್ತಾರೆ ಎಂದರೆ ಸರಿ. ಗಲಾಟೆಯಾಗಿ 8 ವರ್ಷಗಳು ಆಗಿದ್ದ ಕಾರಣಕ್ಕೆ ಈ ಬಗ್ಗೆ ನನಗೆ ನೆನಪಿರಲಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದರಿಂದ 1,000/- ರೂ. ಖರ್ಚು ಸಮೇತ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ